ಕೋಡ್ಲರ ನಿರ್ದೇಶನದ 'ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ' ಎಂಬ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಸಂಚಾರಿ ವಿಜಯ್ ಅವರ ಜೊತೆಗೆ 'ಅವಸ್ಥಾಂತರ' ಎಂಬ ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಈ ಎರಡೂ ಸಿನಿಮಾಗಳ ಬಗ್ಗೆ ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ.

'ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ' ಸಿನಿಮಾ ಒಂದು ಚಿಕ್ಕ ಎಳೆಯನ್ನು ಹಿಡಿದುಕೊಂಡು ಮಲೆನಾಡ ಪುಟ್ಟ ಹಳ್ಳಿಯೊಂದರ ಜನಜೀವನವನ್ನು ಕಾಣಿಸುವ ಸಿನಿಮಾ. ಈ ಸಿನಿಮಾದಲ್ಲಿ ನನ್ನ ಪಾತ್ರದ ಹೆಸರು ಸೌಮ್ಯಾ. ಹೆಸರಷ್ಟೇ ಸೌಮ್ಯ, ಸ್ವಭಾವ ಅದಕ್ಕೆ ತದ್ವಿರುದ್ಧ' ಎಂದು ನಗುತ್ತಾರೆ ಅವರು. 'ಅವಸ್ಥಾಂತರ'ದಲ್ಲಿ ಸಮಕಾಲೀನ ಸಂದರ್ಭದಲ್ಲಿ ಕೌಟುಂಬಿಕ ಸಂಬಂಧಗಳ ಅರ್ಥಶೋಧಕ್ಕೆ ತೊಡಗುವ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರಂತೆ.

'ಪಾತ್ರದಲ್ಲಿ ಕಳೆದುಹೋಗುವುದು ನನಗೆ ಇಷ್ಟವಿಲ್ಲ' ಎಂದು ಸ್ಪಷ್ಟವಾಗಿ ಹೇಳುವ ರಂಜನಿ, 'ನಟನೆಯೆಂದರೆ ಆ ಪಾತ್ರವನ್ನು ಅನುಕರಿಸುವುದಲ್ಲ. ಆದಷ್ಟೂ ಸತ್ಯವಾಗಿ ಆ ಪಾತ್ರ ಹೇಗೆ ವರ್ತಿಸುತ್ತದೆಯೋ ಹಾಗೇ ವರ್ತಿಸುವುದೇ ನಟನೆ' ಎಂದು ತಮ್ಮ ನಟನಾವ್ಯಾಖ್ಯಾನವನ್ನೂ ಮಂಡಿಸುತ್ತಾರೆ. ತಮ್ಮ ಈ ಸೂತ್ರವನ್ನು ಧಾರಾವಾಹಿ ಮತ್ತು ಸಿನಿಮಾ ಎರಡೂ ಪ್ರಕಾರಗಳಿಗೂ ಅನ್ವಯಿಸಿಕೊಂಡೇ ಅವರು ಬೆಳೆಯುತ್ತಿದ್ದಾರೆ. ಹಾಗಿದ್ದೂ ಈ ಎರಡೂ ಪ್ರಕಾರಗಳ ನಡುವೆ ಇರುವ ಸಣ್ಣಪುಟ್ಟ ತಾಂತ್ರಿಕ ವ್ಯತ್ಯಾಸಗಳ ಅರಿವೂ ಅವರಿಗಿದೆ. 'ಧಾರಾವಾಹಿಗಳಲ್ಲಿ ಹೆಚ್ಚಾಗಿ ಕ್ಲೋಸ್ ಅಪ್ ಶಾಟ್‌ಗಳನ್ನೇ ಬಳಸುತ್ತಾರೆ. ಅಲ್ಲಿ ಮುಖದ ಎಕ್ಸ್‌ಪ್ರೆಶನ್ ಮುಖ್ಯ. ಸಂಭಾಷಣೆಗಳು ಮುಖ್ಯ. ತುಂಬ ಸಲ ಕೈ ಕಾಲುಗಳೆಲ್ಲ ಕೆಲಸಕ್ಕೇ ಬರುವುದಿಲ್ಲ. ಸಿನಿಮಾದಲ್ಲಿ ಹಾಗಲ್ಲ. ಅಲ್ಲಿ ನಟನೆಗೆ ನಮ್ಮ ಆಂಗಿಕ ಮತ್ತು ವಾಚಿಕ ಎರಡರ ಸಂಪೂರ್ಣ ಸಾಧ್ಯತೆಗಳನ್ನು ಬಳಸಿಕೊಂಡೇ ನಟಿಸಬೇಕಾಗುತ್ತದೆ' ಎನ್ನುವುದು ಅವರ ಅನುಭವದ ಮಾತು.

ನಟನೆಯ ಜೊತೆಗೆ ಬರವಣಿಗೆಯಲ್ಲಿಯೂ ರಂಜನಿಗೆ ಆಸಕ್ತಿ ಇದೆ. 'ಕಥೆ ಹೇಳುವ ಎಲ್ಲ ವಿಧಾನಗಳಲ್ಲಿಯೂ ನನಗೆ ಆಸಕ್ತಿಯಿದೆ. ಚಿತ್ರಕಥೆ ಮತ್ತು ನಿರ್ದೇಶನದ ಕಡೆಗೂ ಗಮನಹರಿಸುತ್ತಿದ್ದೇನೆ' ಎನ್ನುವ ಅವರು ನಟನೆಯ ನಡುವಿನ ಬಿಡುವನ್ನು ಸಂಪೂರ್ಣವಾಗಿ ತಮ್ಮ ಈ ಆಸಕ್ತಿಗಾಗಿಯೇ ಮೀಸಲಿಡುತ್ತಾರೆ. ಒಳ್ಳೆಯ ನಟಿ ಎಂದು ಗುರ್ತಿಸಿಕೊಂಡಿರುವ ಅವರು, ಒಳ್ಳೆಯ ಬರಹಗಾರ್ತಿ, ಒಳ್ಳೆಯ ನಿರ್ದೇಶಕಿ ಎಂದೂ ಗುರ್ತಿಸಿಕೊಳ್ಳುವ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದಾರೆ. ■

# ಜಗ್ಗಣ್ಣ @40

ವಿಶೇಷ ಸಂದರ್ಶನವೊಂದಕ್ಕೆ ಜಗ್ಗೇಶ್ ಮನೆಗೆ ಹೋಗಿದ್ದ ಆ ಪತ್ರಕರ್ತರು ಸಂದರ್ಶನ ಮುಗಿಸಿ ಹೊರಬಿದ್ದಿದ್ದೇ ಹೊಟ್ಟೆ ಹಿಡಿದುಕೊಂಡು ನಗಲು ಶುರುಮಾಡಿದರು. ಜಗ್ಗೇಶ್ ಜೊತೆ ಮಾತಾಡುವಾಗಲೇ ಅವರಿಗೆ ತಡೆದುಕೊಳ್ಳಲಾಗದಷ್ಟು ನಗು ಬರುತ್ತಿತ್ತು. ಗಂಭೀರ ಮಾತಿನ ಮಧ್ಯೆ ತಾನು ನಕ್ಕರೆ ಕೋಪ ಮಾಡಿಕೊಳ್ಳಬಹುದು ಎಂದುಕೊಂಡು ತಡೆದುಕೊಂಡಿದ್ದರು. ಇದು ಜಗ್ಗೇಶ್ ಒಡನಾಟಕ್ಕೆ ಬಂದವರೆಲ್ಲರ ಅನುಭವ.

ನಟನೆಯಲ್ಲಿ ಜಗ್ಗೇಶ್ ಅವರಿಗೇ ವಿಶಿಷ್ಟವಾದ ಒಂದು ಮ್ಯಾನರಿಸಂ ಇದೆ. ಅವರು ಕಣ್ಣು ಕಿರಿದುಗೊಳಿಸಿ, ನಾಲಿಗೆ ಹೊರಚಾಚಿ, ಮಡಚಿ, ಕೈ ಉದ್ದುದ್ದ ಅಲ್ಲಾಡಿಸಿ, 'ಐತಲಕ್ಕಡಿ ಪಕಡಿ...' ಎಂದರೆ ಕಾದು ಕೂತ ಇಸ್ತ್ರಿಪೆಟ್ಟಿಗೆಗೂ ಒಮ್ಮೆ ನಗುವುಕ್ಕಬೇಕು. ಆ ಕಣ್ಣ ಹೊರಳಾಟ, ಕೈ ಬೆರಳುಗಳ ಚೇಷ್ಟೆ, ತುಟಿಗಳ ವಕ್ರಚಲನೆ ಬರೀ ಕ್ಯಾಮೆರಾ ಎದುರಿಗಷ್ಟೇ ಅಲ್ಲ, ಸಾಮಾನ್ಯವಾಗಿ ಮಾತಾಡಬೇಕಾದರೂ ಸಹಜವಾಗಿ ಬರುವಷ್ಟು ಅದು ಅವರ ಮೈಗೂಡಿಹೋಗಿದೆ. ಹಾಗಾಗಿಯೇ ಅವರ ಜೊತೆ ಗಂಭೀರ ವಿಚಾರ ವಿನಿಮಯ ಮಾಡುತ್ತಿದ್ದಾಗಲೂ ಅವರ ಮ್ಯಾನರಿಸಂ ನೋಡಿ ನಗುವುಕ್ಕುತ್ತದೆ.



ನಟನೊಬ್ಬನ ಮ್ಯಾನರಿಸಂ ಪ್ರೇಕ್ಷಕನ ಮನಸಲ್ಲಿ ಸ್ಥಿರವಾಗುವುದು ಸುಲಭವಲ್ಲ. ಜಗ್ಗೇಶ್ ಅವರ 'ಯೂನಿಕ್' ಮ್ಯಾನರಿಸಮ್ ಹಿಂದೆಯೂ ಹಲವು ದಶಕಗಳ ಪರಿಶ್ರಮವಿದೆ. ಹಂತಹಂತವಾಗಿ ಮೇಲೇರಿ ಬಂದ ಕಲಾವಿದನೊಬ್ಬನ ಯಶೋಗಾಥೆಯಿದೆ. ಜಗ್ಗೇಶ್ ಎಂಬ ಆ ಯಶೋಗಾಥೆಯ ಮೊದಲ ಅಕ್ಷರಕ್ಕೆ ಈಗ ನಲ್ವತ್ತು ವರ್ಷಗಳು. ಹೌದು, ಜಗ್ಗೇಶ್ ಚಿತ್ರರಂಗಕ್ಕೆ ಬಂದು ನಲ್ವತ್ತು ವರ್ಷಗಳು ಸಂದವು.

'ಇಬ್ಬನಿ ಕರಗಿತು' ಅವರ ನಟನೆಯ ಮೊದಲ ಸಿನಿಮಾ. ಈ ಸಿನಿಮಾದ ನಂತರ ಅವರು ಹಲವು ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದರು. 1992ರಲ್ಲಿ ತೆರೆಕಂಡ 'ತರ್ಲೆ ನನ್ಮಗ' ಅವರು ನಾಯಕನಾಗಿ ನಟಿಸಿದ ಮೊದಲ ಸಿನಿಮಾ. ವಿಶೇಷವೆಂದರೆ ಇದು ಉಪೇಂದ್ರ ಅವರ ನಿರ್ದೇಶನದ ಮೊದಲ ಸಿನಿಮಾವೂ ಹೌದು. ಇದೇ ವರ್ಷ ಇವರು ನಾಯಕನಾಗಿ ನಟಿಸಿದ 'ಭಂಡ ನನ ಗಂಡ' ಸಿನಿಮಾ ಕೂಡ ಬಿಡುಗಡೆಯಾಯ್ತು. ಈ ಸಿನಿಮಾದಲ್ಲಿ ಜಗ್ಗೇಶ್ ಅವರು ಹಾಡಿದ 'ಅಂತಿಂಥ ಗಂಡು ನಾನಲ್ಲ' ಹಾಡು ಈಗಲೂ ಜನಪ್ರಿಯವೇ. ಇದಾದ ನಂತರ ಒಂದರ ಹಿಂದೆ ಇನ್ನೊಂದರಂತೆ ಸಿನಿಮಾಗಳಲ್ಲಿ ನಟಿಸುತ್ತಲೇ ಹೋದ ಜಗ್ಗೇಶ್, 'ಹಾಕಿದ ದುಡ್ಡಿಗೆ ಮೋಸ ಇಲ್ಲ'ದ ಗ್ಯಾರಂಟಿ ನಟನಾಗಿ ನಿರ್ಮಾಪಕರ ನೆಚ್ಚಿನ ಪಟ್ಟಿ ಸೇರಿದರು.

ಕನ್ನಡದಲ್ಲಿ ಪ್ರತಿಭಾವಂತ ಹಾಸ್ಯನಟರ ಒಂದು ದೊಡ್ಡ ಪರಂಪರೆಯೇ ಇದೆ. ತಮ್ಮದೇ ಆದ ವಿಶಿಷ್ಟ ಶೈಲಿ, ಪ್ರತಿಭೆಯ ಮೂಲಕ ಗುರ್ತಿಸಿಕೊಂಡ ಹಲವು ಕಲಾವಿದರು ಈ ಪರಂಪರೆಯ ಭಾಗವಾಗಿದ್ದರೂ ಹಾಸ್ಯನಟರಾಗಿಯೂ ನಾಯಕನಟರಾಗಿಯೂ ಮುಖ್ಯವಾಹಿನಿಯಲ್ಲಿ ಉಳಿದುಕೊಂಡವರು ಬೆರಳೆಣಿಕೆಯಷ್ಟು. ಅಂಥ ನಟರಲ್ಲಿ ಜಗ್ಗೇಶ್ ಖಂಡಿತ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಕೇವಲ ಆಂಗಿಕ ಅಭಿನಯವಷ್ಟೇ ಅಲ್ಲ, ಡೈಲಾಗ್ ಡೆಲಿವರಿಯಲ್ಲಿನ ಜಗ್ಗೇಶ್ ಅವರ ಟೈಮಿಂಗ್ ಕೂಡ ಅಷ್ಟೇ ಹರಿತವಾದ್ದು. ಸೀದಾ ಸಾದಾ ಸಂಭಾಷಣೆಗೂ ಕಾಮಿಡಿಯ ಫ್ಲೇವರ್ ಅಂಟಿಸಿ, ಕಿಸಿಕ್ಕನೆ ನಗುವುಕ್ಕಿಸುವ ಪ್ರತಿಭೆ ಅವರಿಗಿದೆ. ಬೇರೆ ನಟರ ಬಾಯಿಯಲ್ಲಿ ಅಶ್ಲೀಲ ಅನಿಸಬಹುದಾದ ಹಲವು ಶಬ್ದಗಳು ಜಗ್ಗೇಶ್ ಅವರ ನಾಲಿಗೆಯ ಹೊರಳುವಿಕೆಯಲ್ಲಿ ನಗುವಿನ ಪುಗ್ಗೆಗೆ ಚುಚ್ಚಿದ ಸೂಜಿಯಾಗಿಬಿಡುತ್ತದೆ.

ಬರೀ ನಟರಾಗಿಯಷ್ಟೇ ಅಲ್ಲ, ನಿರ್ಮಾಪಕ, ನಿರ್ದೇಶಕ, ಹಿನ್ನೆಲೆ ಗಾಯಕನಾಗಿಯೂ ಚಿತ್ರನಿರ್ಮಿತಿಯ ಭಾಗವಾದ ಜಗ್ಗೇಶ್ ಅವರಿಗೆ ಈಗ 57 ವರ್ಷ. ಈಗಲೂ ಅವರು ಚಿತ್ರರಂಗದ ಬೇಡಿಕೆಯ ನಟರಲ್ಲೊಬ್ಬರು. 'ನೀರ್‌ದೋಸೆ'ಯಂಥ ಹಿಟ್ ಸಿನಿಮಾಗಳನ್ನು ಕೊಡಬಲ್ಲವರು. ಅದಿತಿ ಪ್ರಭುದೇವ ಅವರಂಥ ತಮ್ಮ ಅರ್ಧಕ್ಕಿಂತ ಕಮ್ಮಿ ವಯಸ್ಸಿನ ನಟಿಯರ ಜೊತೆಗೆ 'ತೋತಾಪುರಿ'ಯ ಹುಳಿರುಚಿಯನ್ನು ಕೊಡಬಲ್ಲರು.

ಅವರ ಜೊತೆಗೆ ತುಸು ಕಾಲ ಮಾತನಾಡಿದ ಯಾರಿಗೇ ಆಗಲಿ 'ಜಗ್ಗೇಶ್ ಇನ್ನೂ ಮುಗಿದಿಲ್ಲ' ಎಂಬ ಸಂಗತಿ ಮನವರಿಕೆಯಾಗುತ್ತದೆ. ಇನ್ನಷ್ಟು ಕಥೆಗಳು, ಇನ್ನಷ್ಟು ಸಿನಿಮಾಗಳು ಅವರನ್ನು ಕರೆಯುತ್ತಲೇ ಇವೆ. ಈ ದಾರಿಯಲ್ಲಿ ಅವರಂತೂ ತುಸುವೂ ದಣಿಯದೆ ತಾರುಣ್ಯ ಉಳಿಸಿಕೊಂಡಿದ್ದಾರೆ. ನಲ್ವತ್ತು ಬರಿ ಸಂಖ್ಯೆಯಷ್ಟೆ, ಅವರೊಳಗಿನ ಕಲಾವಿದನಿಗಿನ್ನೂ ಹದಿನೆಂಟು ದಾಟಿಲ್ಲ.

ಚಿತ್ರ: ಕೆ.ಎಸ್. ನಾಗೇಶ್ ಕುಮಾರ್